

ಗಿಡದ ಆಸರೆಯಲ್ಲಿ ಬಾವಲಿ

ನಿರಂತರವಾಗಿ ನಡೆದೇ ಇದೆ. 1972ರ ವನ್ಯಜೀವಿ ಸಂರಕ್ಷಣಾ ಕಾಯಿದೆಯ ಷೆಡ್ಯೂಲ್ 5ರಲ್ಲಿ ಇರುವ ಬಾವಲಿಗಳನ್ನು 'ಕ್ರಿಮಿ' ಎಂದು ಕರೆದಿರುವುದರಿಂದ ಅವುಗಳ ಸಂರಕ್ಷಣೆಗೆ ಯಾವುದೇ ಕಾನೂನಿನ ಬಲವಿಲ್ಲ.

ಧ್ರುವ ಪ್ರದೇಶಗಳನ್ನು ಹೊರತುಪಡಿಸಿ ಪ್ರಪಂಚದಾದ್ಯಂತ ಆವಾಸ ಹೊಂದಿರುವ ಬಾವಲಿಗಳನ್ನು ರೋಗವಾಹಕಗಳೆಂದು ಪರಿಗಣಿಸಲಾಗಿದೆ. ಇವು ರೇಬಿಸ್ ವೈರಾಣುವನ್ನು ಮನುಷ್ಯರಿಗೆ ಹಾಗೂ ಪ್ರಾಣಿಗಳಿಗೆ ವ್ಯಾಪಕವಾಗಿ ಹಬ್ಬಿಸುತ್ತವೆ. ನಮ್ಮಲ್ಲಿ ಬಾವಲಿಯ 120ಕ್ಕೂ ಹೆಚ್ಚು ಪ್ರಭೇದಗಳಿವೆ. ಹಕ್ಕಿಗಳಂತೆ ರೆಕ್ಕೆಗಳಿಲ್ಲದಿದ್ದರೂ ಹಾರುವ ಏಕೈಕ ಸಸ್ತನಿಯೆಂದೇ ಖ್ಯಾತವಾಗಿರುವ ಬಾವಲಿಗಳು ನಿಶಾಚರಿ ಜೀವಿಗಳೆಂದೇ ಪ್ರಸಿದ್ಧ. ಮರ, ಮರದ ಪೊಟರೆ, ಬಂಡೆಗಳ ಸೀಳು, ಕಲ್ಲಿನ ಹೊದರು, ಗುಹೆ, ಪಾಳುಬಿದ್ದ ಹಳೆಯ ಕಟ್ಟಡ, ದೇವಾಲಯಗಳಲ್ಲಿ ಇವುಗಳ ವಾಸ ಹೆಚ್ಚು.

ಹಣ್ಣು, ಪರಾಗರೇಣು, ಮಕರಂದ ಸೇವಿಸುವ ಹೆಬ್ಬಾವಲಿಗಳು ಗಾತ್ರದಲ್ಲಿ ದೊಡ್ಡವು. ಇವುಗಳ ಕಣ್ಣು ಮೂಗುಗಳು ಸರಿಯಾಗಿ ವಿಕಾಸವಾಗಿದ್ದು ಹೂವಿನ ಸ್ಥಳ ಮತ್ತು ವಾಸನೆ ಗ್ರಹಿಸುವ ಶಕ್ತಿ ಪಡೆದಿವೆ. ಕಿರು ಬಾವಲಿಗಳ ಕಣ್ಣು ಚಿಕ್ಕದಾಗಿದ್ದರೂ ಕಿವಿಗಳು ದೊಡ್ಡದಾಗಿವೆ. ಜಗತ್ತಿನಾದ್ಯಂತ ಇರುವ ಬಾವಲಿಗಳ ಪೈಕಿ ಶೇ. 70 ಕಿರುಬಾವಲಿಗಳು ಮತ್ತು ಉಳಿದವು ಹೆಬ್ಬಾವಲಿಗಳಾಗಿವೆ. ಬಾವಲಿಗಳು ತಮ್ಮ ದೇಹ ತೂಕದ ಮೂರನೆಯ ಒಂದು ಭಾಗದಷ್ಟು ಆಹಾರ ಸೇವಿಸುತ್ತವೆ. ಶೇ. 25ರಷ್ಟು ಬಾವಲಿಗಳು ಸಸ್ಯಾಹಾರಿಗಳಾಗಿವೆ.

ಕಿರು ಬಾವಲಿಗಳ ದೃಷ್ಟಿ ಮಂದವಾದ್ದರಿಂದ ಅವು ಶಬ್ದಪ್ರತಿಫಲನ ವ್ಯವಸ್ಥೆ ವಿಧಾನದಿಂದ ಶಕ್ತಿಶಾಲಿ ಶಬ್ದ ತರಂಗ (ಸೆಕೆಂಡಿಗೆ 1 ಲಕ್ಷಕ್ಕೂ ಹೆಚ್ಚು) ಹೊಮ್ಮಿಸಿ ಹಣ್ಣು ಮತ್ತು ಶತ್ರುಗಳನ್ನು ಪತ್ತೆ ಮಾಡುತ್ತವೆ. ಇದನ್ನು 'ಎಕೊಲೆಶನ್' ಎನ್ನುತ್ತಾರೆ. ಇತರ ಬಾವಲಿಗಳೊಂದಿಗೆ ಸಂಪರ್ಕ ಸಾಧಿಸಲು, ಹಾರುವ ದಾರಿ ಪತ್ತೆ ಮಾಡಲು ಈ ವಿಧಾನ ಬಳಕೆಯಾಗುತ್ತದೆ. ಹೆಬ್ಬಾವಲಿಗಳ ದೃಷ್ಟಿ ಮತ್ತು ವಾಸನೆ ಗ್ರಹಿಸುವ ಶಕ್ತಿ ಚೆನ್ನಾಗಿರುವುದರಿಂದ ಇವು ಎಕೊಲೆಶನ್ ವಿಧಾನ ಬಳಸುವುದಿಲ್ಲ. 50 ಕಿ.ಮೀ. ದೂರದವರೆಗೂ ಆಹಾರ ಹುಡುಕುವ ಬಾವಲಿಗಳು ಗಂಟೆಗೆ 160 ಕಿ.ಮೀ. ವೇಗದಲ್ಲಿ ಹಾರಬಲ್ಲವು. ಹೆಬ್ಬಾವಲಿಗಳು ಖಾದ್ಯವಾಗಿ ಬಳಕೆಯಾಗುವುದೂ ಇದೆ. ಮುಂಗೈ ಮತ್ತು ಹಿಂಗಾಲುಗಳೆರಡರ ಸಮರ್ಥ ಬಳಕೆ ಇವಕ್ಕೆ ತಿಳಿದಿದೆ. ಹಿಂಗಾಲುಗಳು 180 ಡಿಗ್ರಿವರೆಗೆ ಹಿಮ್ಮುಖವಾಗಿರುವುದರಿಂದ ಮರದ ಕೊಂಬೆಗಳಿಗೆ ನೇತಾಡುವಲ್ಲಿ ನೆರವಾಗುತ್ತವೆ.

ಬಾವಲಿಯ ಹಿಕ್ಕೆಯು ಅತಿ ಹೆಚ್ಚು ಸಾರಜನಕ, ರಂಜಕ, ಬ್ಯಾಕ್ಟೀರಿಯಾ ಮತ್ತು ಸುಣ್ಣದಿಂದ ಕೂಡಿದ್ದು ಅತ್ಯುತ್ತಮ ಸಾವಯವ ಗೊಬ್ಬರವೆನಿಸಿದೆ. ದಕ್ಷಿಣ ಭಾರತಕ್ಕೆ ಸೀಮಿತವಾಗಿದ್ದ ಕೇಸರಿ ಬಣ್ಣದ ಬಾವಲಿ ತೀರಾ ಇತ್ತೀಚೆಗೆ ಛತ್ತೀಸ್‌ಘಡದ ಕಂಗರ್ ಕಣಿವೆಯಲ್ಲಿ ಪತ್ತೆಯಾಗಿದೆ. ದೇಶದಲ್ಲಿ ಸಿಗುವ 126 ಪ್ರಭೇದಗಳ ಪೈಕಿ 36 ಕರ್ನಾಟಕದಲ್ಲೇ ಇವೆ ಎಂಬ ಅಂದಾಜಿದೆ. ನಮ್ಮ ಸಾವನದುರ್ಗದ ಬೆಟ್ಟ ಪ್ರದೇಶದಲ್ಲಿ ನಾಲ್ಕು ಪ್ರಭೇದದ ಬಾವಲಿಗಳಿವೆ. ಬಾವಲಿಗಳ ಸಂರಕ್ಷಣೆಗೆಂದೇ ಇರುವ 'ಬ್ಯಾಟ್ ಕನ್ಸರ್ವೇಷನ್ ಇಂಡಿಯಾ ಟ್ರಸ್ಟ್' ಸಂಸ್ಥೆಯ ರಾಜೇಶ್ ಪುಟ್ಟಸ್ವಾಮಯ್ಯ ಮತ್ತು ಸಂಗಡಿಗರು ಹಾರುವ ಸಸ್ತನಿಗಳ ಸಂರಕ್ಷಣೆಗೆ ಸಾಕಷ್ಟು ಕೆಲಸ ಮಾಡುತ್ತಿದ್ದಾರೆ. ಆದರೆ ಅವುಗಳ ಆವಾಸ ಇಲ್ಲಿ ಸುಭದ್ರವಾಗಿಲ್ಲ. ಹಿಂದೆಲ್ಲಾ ಬಹು ಸಂಖ್ಯೆಯಲ್ಲಿ ಕಾಣಿಸಿಕೊಳ್ಳುತ್ತಿದ್ದ ಅಪರೂಪದ 'ಕೋಲಾರ್ ಲೀಫ್ ನೋಸ್ಡ್ ಬ್ಯಾಟ್' (ಕೋಲಾರದ ಎಲೆ ಮೂಗಿನ ಬಾವಲಿ) ಕಳೆದ ಹತ್ತು ವರ್ಷಗಳಲ್ಲಿ ನಮ್ಮ ರಾಜ್ಯದ ಬಹು ಭಾಗಗಳಿಂದ ಕಾಣೆಯಾಗಿದ್ದು ಅಳಿವಿನಂಚಿಗೆ ಸರಿದಿದೆ. ಗ್ರಾನೈಟ್ ಮತ್ತು ಸುಣ್ಣದ ಕಲ್ಲಿನ ಗಣಿಗಾರಿಕೆಯಿಂದಾಗಿ ಬಾವಲಿಗಳ ಆವಾಸ ಛಿದ್ರಗೊಂಡಿದೆ.

## ಬಾವಲಿ ಮತ್ತು ಸಂಸ್ಕೃತಿ

ಚೀನೀ ಸಂಸ್ಕೃತಿಯಲ್ಲಿ ಬಾವಲಿಗಳನ್ನು ಅದೃಷ್ಟ ಮತ್ತು ಸಮೃದ್ಧಿಯ ಸಂಕೇತ ಎಂದು ಪರಿಗಣಿಸಲಾಗಿದೆ. ಒಟ್ಟೊಟ್ಟಿಗೆ ಐದು ಬಾವಲಿಗಳು ಕಾಣಿಸಿಕೊಂಡರೆ ಅವು ಮನುಷ್ಯನಿಗೆ ಸದ್ಗುಣ, ದೀರ್ಘಾಯುಷ್ಯ, ಸಂಪತ್ತು, ಆರೋಗ್ಯ ಮತ್ತು ಸ್ವಾಭಾವಿಕ ಮರಣ ತರುತ್ತವೆ ಎಂಬ ನಂಬಿಕೆ ಬಲವಾಗಿದೆ. ಜಪಾನ್‌ನಲ್ಲಿ ಬಾವಲಿಯನ್ನು ಕೊಮೊರಿ ಎನ್ನುತ್ತಾರೆ. ಹಾಗೆಂದರೆ ಸಂತೋಷ ಎಂದರ್ಥ. ಕನಸಿನಲ್ಲಿ ಬಾವಲಿಗಳು ಕಾಣಿಸಿಕೊಂಡರೆ ಅಶುಭ ಎಂದು ನಂಬುವ ಅನೇಕರು ನಮ್ಮಲ್ಲಿದ್ದಾರೆ. ಯೂರೋಪಿನಲ್ಲಿ ಬಾವಲಿಗಳನ್ನು ದೆವ್ವ ಹಾಗೂ ಮಾಟಗಾರರ ಸಂಗಾತಿಗಳು ಎನ್ನುತ್ತಾರೆ. ಥಾಯ್ಲೆಂಡಿನಲ್ಲಿ ಬಾವಲಿಗಳ ನೆನಪಿಗಾಗಿ 'ಬ್ಯಾಟ್ ಟೆಂಪಲ್' ಇದೆ. ಏಪ್ರಿಲ್ 17 'ಅಂತರರಾಷ್ಟ್ರೀಯ ಬಾವಲಿ ಮೆಚ್ಚುಗೆ ದಿನ'.

ನಂಬಿಕೆ, ಅಪಶ್ರದ್ಧೆಗಳೇನೇ ಇರಲಿ, ಬಾವಲಿಗಳು ಭೂಮಿಯ ಜೀವಿವ್ಯವಸ್ಥೆಯ ಬಹು ಮುಖ್ಯ ಕೊಂಡಿಗಳಾಗಿವೆ. ಉಷ್ಣವಲಯದ ಕಾಡುಗಳ ಬೀಜ ಪ್ರಸರಣದಲ್ಲಿ ಮತ್ತು ಸೊಳ್ಳೆ ಹಾಗೂ ಇತರ ಕೀಟಗಳ ನಿಯಂತ್ರಣದಲ್ಲಿ ಬಾವಲಿಗಳ ಪಾತ್ರ ಹಿರಿದಾಗಿದೆ. ಅವುಗಳ ರಕ್ಷಣೆ–ಸಂರಕ್ಷಣೆಯ ಹೊಣೆ ನಮ್ಮೆಲ್ಲರದ್ದು.

ಪ್ರತಿಕ್ರಿಯಿಸಿ: feedback@sudha.co.in